**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**<u>ಸಿ.ಸಿ. ನಂ: 37/2025</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ತುಕಾರಾಮ ನಾಯ್ಕ** | **ಪಿ.ಡಬ್ಲ್ಯೂ-01** |
| **ತಂದೆಯ ಹೆಸರು** | **:** | **ಶಂಕರ ನಾಯ್ಕ** | **ಸಿ.ಡಬ್ಲ್ಯೂ-01** |
| **ವಯಸ್ಸು** | **:** | **48 ವರ್ಷ** | |
| **ಉದ್ಯೋಗ** | **:** | **ಅಬಕಾರಿ ಉಪಅಧೀಕ್ಷಕರು, ಬೆಂಗಳೂರು ಉಪವಿಭಾಗ, ಬೆಂಗಳೂರು** | **ಸಾಕ್ಷಿಗೆ ವಿ.ಸಿ ಮುಖಾಂತರ ಪ್ರಮಾಣ ವಚನ ಭೋದಿಸಿದ ದಿನಾಂಕಃ 28.07.2026.** |
| **ವಾಸಸ್ಥಳ** | **:** | **ಬೆಂಗಳೂರು** | |

**<u>ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ (ವಿ.ಸಿ ಮುಖಾಂತರ)</u>**

ನಾನು ಅಗಸ್ಟ 2019 ರಿಂದ ಅಕ್ಟೊಬರ್ 2023 ರವರೆಗೆ ಸಂಡೂರು ಅಬಕಾರಿ ನಿರೀಕ್ಷಕನಾಗಿ, ಅಬಕಾರಿ ಉಪ ಆಯುಕ್ತಕರ ಕಚೇರಿ, ಬಳ್ಳಾರಿಯಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 07.03.2023 ರಂದು ಬೆಃ7.30 ರ ಸಮಯದಲ್ಲಿ ಸಂಡೂರು ತಾಲೂಕಿನಲ್ಲಿ ಗಸ್ತು ಮಾಡುತ್ತಿದ್ದಾಗ ವಿಠಲಾಪುರ ಗ್ರಾಮದಲ್ಲಿ, ಪಂಚಾಯತಿ ಎದುರುಗಡೆ ಇರುವ ಆರೋಪಿಯ ಡಬ್ಬಾ ಅಂಡಿಯಲ್ಲಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ, ಸದರಿ ವಿಷಯವನ್ನು ಸಿಬ್ಬಂದಿಯವರಿಗೆ ತಿಳಿಸಿ ಅವರ ಜೊತೆ ಸೇರಿ ವಿಠಲಾಪುರ ಗ್ರಾಮಕ್ಕೆ ಹೋಗಿ ಇಬ್ಬರು ಪಂಚರನ್ನು ಬರಮಾಡಿಕೊಂಡು, ಅವರಿಗೆ ಬಂದ ಭಾತ್ಮಿ ವಿಷಯವನ್ನು ತಿಳಿಸಿ, ಅವರ ಜೊತೆಯಲ್ಲಿ ಭಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ.

ನಂತರ ಸದರಿ ಡಬ್ಬಾ ಅಂಗಡಿಯ ಹತ್ತಿರ ಹೋಗಿ ಅಲ್ಲಿ ಇದ್ದ ವ್ಯಕ್ತಿಯನ್ನು ವಿಚಾರಿಸಿ ನಮ್ಮ ಹತ್ತಿರ ಇದ್ದ ವಿಷಯವನ್ನು ತಿಳಿಸಿ ಅಂಗಡಿಯನ್ನು ಶೋಧನೆ

ಮಾಡಬೇಕಾಗುತ್ತದೆ ಎಂದು ಹೇಳಿ, ನ್ಯಾಯಾಲಯದಿಂದ ಶೋದನಾ ಸಮುಚಿತ ಆಧಾರ ಪತ್ರವನ್ನು ಪಡೆಯಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರ ಪತ್ರವನ್ನು ತಯಾರಿಸಿ ಅಂಗಡಿಯನ್ನು ಶೋದನೆ ಮಾಡಲು ಮುಂದಾಗಿರುತ್ತೇವೆ.

ಸದರಿ ಅಂಗಡಿಯನ್ನು ಶೋದನೆ ಮಾಡಿ ನೋಡಿದಾಗ ಸದರಿ ಅಂಗಡಿಯ ಒಂದು ಮೂಲೆಯಲ್ಲಿ ಬಿಯರ್ ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ಅವುಗಳನ್ನು ಎಣಿಸಿ ನೋಡಿದಾಗ, 180 ಎಂ.ಎಲ್ ನ 8 ಪಿ.ಎಂ ವಿಸ್ಕಿಯ 16 ಟೇಟ್ರಾ ಪಾಕೇಟ್‌ಗಳು, 180 ಎಂ.ಎಲ್ ನ ಬಿ.ಪಿ ವಿಸ್ಕಿಯ 16 ಟೇಟ್ರಾ ಪಾಕೇಟ್‌ಗಳು, 180 ಎಂ.ಎಲ್ ನ ಓ.ಟಿ ವಿಸ್ಕಿಯ 10 ಟೇಟ್ರಾ ಪಾಕೇಟ್‌ಗಳು, 90 ಎಂ.ಎಲ್ ನ ಓ.ಸಿ ವಿಸ್ಕಿಯ 81 ಟೇಟ್ರಾ ಪಾಕೇಟ್‌ಗಳು, 90 ಎಂ.ಎಲ್ ನ ಎಂ.ಸಿ ರಮ್‌ನ 32 ಟೇಟ್ರಾ ಪಾಕೇಟ್‌ಗಳು, 90 ಎಂ.ಎಲ್ ನ ಹೈವರ್ಡ್ಸ್ ವಿಸ್ಕಿಯ 90 ಟೇಟ್ರಾ ಪಾಕೇಟ್‌ಗಳು, 650 ಎಂ.ಎಲ್ ನ ಕೀಂಗ್ ಫಿಶೀಯರ್ ಬಿಯರ್ ನ 10 ಬಾಟಲಿಗಳು, 500 ಎಂ.ಎಲ್ ನ ಕೀಂಗ್ ಫಿಶೀಯರ್ ಬಿಯರ್ ನ 19 ಟೀನ್‌ಗಳು, 330 ಎಂ.ಎಲ್ ನ ಕೀಂಗ್ ಫಿಶೀಯರ್ ಬಿಯರ್ ನ 21 ಟೀನ್‌ಗಳು ಕಂಡು ಬಂದಿರುತ್ತವೆ.

ನಂತರ ಆರೋಪಿಯನ್ನು ಮೇಲೆ ಹೇಳಿರುವ ಮದ್ದೆ ಮಾಲುಗಳ ಬಗ್ಗೆ ಕೇಳಲಾಗಿ, ಆರೋಪಿ ಹತ್ತಿರ ಯಾವುದೇ ದಾಖಲಾತಿಗಳು ಇರಲಿಲ್ಲ. ಸದರಿ ಆರೋಪಿಯು ಮದ್ಯವನ್ನು ಅಕ್ರಮವಾಗಿ ಇಟ್ಟುಕೊಂಡಿರುವುದರಿಂದ ಎಲ್ಲ ಮು.ಮಾ ಗಳನ್ನು ನಮ್ಮ ವಶಕ್ಕೆ ಪಡೆದುಕೊಂಡು, ರಾಸಾಯನಿಕ ಪರೀಕ್ಷೆಗಾಗಿ ಪ್ರತಿ ಒಂದು ಬ್ರ್ಯಾಂಡ್ ನಿಂದ ತಲಾ 5 ರಂತೆ ಒಟ್ಟು 45 ಮದ್ಯ ಹಾಗೂ ಬಿಯರ್ ಗಳನ್ನು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದು, ಒಂದು ಪ್ಲಾಸ್ಟೀಕ್ ಚೀಲದಲ್ಲಿ ಹಾಕಿ ಅದಕ್ಕೆ ದಾರ

ಮತ್ತು ಬಟ್ಟೆಯಿಂದ ಸುತ್ತಿ ಅರಗಿನಿಂದ ಇಲಾಖಾ ಸೀಲ್ ಮಾಡಿ ಅದರ ಮೇಲೆ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಸ್ಥಳದಲ್ಲಿ ಪಂಚನಾಮೆಯನ್ನು ಬೆಃ8.30 ರಿಂದ 9.35 ರವರೆಗೆ ಜರುಗಿಸಲಾಯಿತು.

ನಂತರ ಮುದ್ದೆ ಮಾಲು ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಕಚೇರಿಗೆ ಬಂದು, ಒಂದು ಪಿರ್ಯಾಧಿಯನ್ನು ತಯಾರಿಸಿ, ಆರೋಪಿಯ ವಿರುದ್ದ ಠಾಣಾ ಮೊಕದ್ದಮೆ ಸಂಖ್ಯೆಃ 57/2022-23 ರಂತೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ನಂತರ ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ-7 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿ ಶೋಧನಾ ಸಮುಚಿತ ಆಧಾರ ಪತ್ರದಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಾದರಿ ಸಹಿ ಮತ್ತು ಸೀಲ್ ನಮೂನೆಯಲ್ಲಿರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೂರಿನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ ಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು

ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ ಗಳನ್ನು ನೋಡಿ ಗುರುತಿಸಿದ್ದು, 180 ಎಂ.ಎಲ್ ನ 8 ಪಿ.ಎಂ ವಿಸ್ಕಿಯ 5 ಟೇಟ್ರಾ ಪಾಕೇಟ್ ನ್ನು ಮು.ಮಾ 1 ಎಂದು, 180 ಎಂ.ಎಲ್ ನ ಬಿ.ಪಿ ವಿಸ್ಕಿಯ 5 ಟೇಟ್ರಾ ಪಾಕೇಟ್ ನ್ನು ಮು.ಮಾ 2 ಎಂದು, 180 ಎಂ.ಎಲ್ ನ ಓ.ಟಿ ವಿಸ್ಕಿಯ 5 ಟೇಟ್ರಾ ಪಾಕೇಟ್ ನ್ನು ಮು.ಮಾ 3 ಎಂದು, 90 ಎಂ.ಎಲ್ ನ ಓ.ಸಿ ವಿಸ್ಕಿಯ 5 ಟೇಟ್ರಾ ಪಾಕೇಟ್ ನ್ನು ಮು.ಮಾ 4 ಎಂದು, 90 ಎಂ.ಎಲ್ ನ ಎಂ.ಸಿ ರಮ್‌ನ 5 ಟೇಟ್ರಾ ಪಾಕೇಟ್ ನ್ನು ಮು.ಮಾ 5 ಎಂದು, 90 ಎಂ.ಎಲ್ ನ ಹೈವರ್ಡ್ಸ್ ವಿಸ್ಕಿಯ 5 ಟೇಟ್ರಾ ಪಾಕೇಟ್ ನ್ನು ಮು.ಮಾ 6 ಎಂದು, 650 ಎಂ.ಎಲ್ ನ ಕೀಂಗ್ ಫಿಶೀಯರ್ ಬಿಯರ್ ನ 5 ಬಾಟಲಿಗಳನ್ನು ಮು.ಮಾ 7 ಎಂದು, 500 ಎಂ.ಎಲ್ ನ ಕೀಂಗ್ ಫಿಶೀಯರ್ ಬಿಯರ್ ನ 5 ಟೀನ್‌ಗಳು ಮು.ಮಾ 8 ಎಂದು, 330 ಎಂ.ಎಲ್‌ನ ಕೀಂಗ್ ಫಿಶೀಯರ್ ಬಿಯರ್ ನ 5 ಟೀನ್‌ಗಳು ಮು.ಮಾ 9 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಎಸ್ ವಕೀಲರಿಂದಃ**

ನಾನು ಪ್ರಸತ್ತು ಸಮಯದಲ್ಲಿ ಅಬಕಾರಿ ನಿರೀಕ್ಷಕನಾಗಿ ಬಳ್ಳಾರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೆ. ನನಗೆ ಬೆಃ 7.30 ಗಂಟೆಗೆ ಭಾತ್ಮಿ ವಿಷಯ ಬಂದಿರುತ್ತದೆ. ನನ್ನ ಪಿರ್ಯಾಧಿಯಲ್ಲಿ ನನಗೆ ಬೆಃ7.30 ಗಂಟೆಗೆ ಭಾತ್ಮಿ ವಿಷಯ ಬಂದಿರುತ್ತದೆ ಎಂದು ತಿಳಿಸಿರುವುದಿಲ್ಲ. ನಿಪಿ-4 ರಲ್ಲಿ ದಿಃ07.03.2023 ರಂದು ಬೆಃ8.30 ಕ್ಕೆ ಅಬಕಾರಿ ಜಂಟಿ ಆಯುಕ್ತಕರು, ಹೊಸಪೇಟೆ, ವಿಭಾಗದಿಂದ ಮಾಹಿತಿ ಬಂದಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರನ್ನು ವಿಠಲಾಪುರ ಗ್ರಾಮದಿಂದ

ಬರಮಾಡಿಕೊಂಡಿರುತ್ತೇನೆ. ಬಳ್ಳಾರಿಯಿಂದ ವಿಠಲಾಪುರ ಗ್ರಾಮ ಸಮಾರು 20 ಕಿ.ಮೀ ಅಗುತ್ತದೆ. ಅಲ್ಲಿ ಹೋಗಲು ಸುಮಾರು 40 ನಿಮೀಷ ಬೇಕಾಗುತ್ತದೆ. ಘಟನಾ ಸ್ಥಳಕ್ಕೆ ಪಂಚರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಖಚಿತ ಭಾತ್ಮಿ ಬಂದ ತಕ್ಷಣ ನ್ಯಾಯಾಲಯದಿಂದ ಶೋಧನಾ ವಾರೆಂಟ್ ನ್ನು ಪಡೆಯಬಹುದಾಗಿತ್ತು. ಪಂಚರು ಬಳ್ಳಾರಿಯ ನಿವಾಸಿಯಾಗಿರುತ್ತಾರೆ.

ಪಂಚನಾಮೆಯಲ್ಲಿ ಪಂಚರು ವಿಠಲಾಪುರ ಗ್ರಾಮದವರು ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರು ಬಳ್ಳಾರಿ ನಿವಾಸಿಯಾಗಿದ್ದು ಗೊತ್ತಿದ್ದರು ಸಹ ಅವರನ್ನು ವಿಠಲಾಪುರ ಗ್ರಾಮದಲ್ಲಿ ಬರಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಬಳ್ಳಾರಿಯ ಕಚೇರಿಯಲ್ಲಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಸುತ್ತ ಮುತ್ತ ಗ್ರಾಮ ಪಂಚಾಯತಿ ಮತ್ತು ಮತ್ತೊಂದು ಡಬ್ಬಾ ಅಂಗಡಿ ಇತ್ತು. ಗ್ರಾಮ ಪಂಚಾಯತಿಯವರನ್ನು ಮತ್ತು ಪಕ್ಕದಲ್ಲಿ ಇದ್ದ ಡಬ್ಬಾ ಅಂಗಡಿಯವರನ್ನು ಸಾಕ್ಷಿದಾರರಾಗಿ ಬರಲು ಕೇಳಿಕೊಂಡಿರುತ್ತೇನೆ ಆದರೆ ಅವರು ಬಂದಿರುವುದಿಲ್ಲ. ಗ್ರಾಮ ಪಂಚಾಯತಿಯ ಪಿ.ಡಿ.ಓ ಅಥವಾ ಕಾರ್ಯದರ್ಶಿಯವರನ್ನು ಸಾಕ್ಷಿದಾರರಾಗಿ ಬರಮಾಡಿಕೊಂಡಿರುವುದಿಲ್ಲ ಕಾರಣ ಅದು ಬೆಳ್ಳಗ್ಗಿನ ಜಾವ ಆಗಿರುತ್ತದೆ ಎಂದು ನುಡಿಯುತ್ತಾರೆ.

ಆರೋಪಿಯ ಡಬ್ಬಾ ಅಂಗಡಿಯ ಹತ್ತಿರ ಹೋದಾಗ ಸಾರ್ವಜನಿಕರು ಅಲ್ಲಿಂದ ಓಡಿ ಹೋಗಿರುತ್ತಾರೆ. ಮು.ಮಾ ಗಳು ಎಲ್ಲಿಂದ ತಂದಿರುವುದಾಗಿ ಆರೋಪಿಯನ್ನು ವಿಚಾರಿಸಿರುತ್ತೇನೆ ಆದರೆ ಅವರು ಯಾವುದೇ ಉತ್ತರ ನೀಡಿರುವುದಿಲ್ಲ. ಮು.ಮಾ ಗಳು ಕರ್ನಾಟಕದಲ್ಲಿ ತಯಾರು ಆಗಿರುವ ಮದ್ಯ ಆಗಿರುತ್ತದೆ.

ಹೊಸಪೇಟೆ ವಿಭಾಗದ ಅಬಕಾರಿ ಜಂಟಿ ಆಯುಕ್ತಕರು ಪ್ರಕರಣವನ್ನು ದಾಖಲಿಸಬೇಕು ಎಂದು ನಿರ್ದೇಶನ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕಿ ಸಂಖ್ಯೆಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಶೋದನಾ ವಾರೆಂಟ್ ನ್ನು ಸಹ ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚರನ್ನು ಬಳ್ಳಾರಿಯ ನಮ್ಮ ಕಚೇರಿಗೆ ಕರೆಯಿಸಿ ಮುದ್ದೆ ಮಾಲುಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಮಾಡದೆ ಇದ್ದರೂ ನಮ್ಮ ಇಲಾಖೆಯ ಅಂಕಿ ಸಂಖ್ಯೆಗೋಸ್ಕರ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲೇವಾರಿಯಾಗದೆ ಇರುವ ಮು.ಮಾ ಗಳನ್ನು ಉಪಯೋಗಿಸಿ ಈ ಪ್ರಕರಣದಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**